The Company is providing remote e-voting facility ("**remote e-voting**") to all its Members to cast their votes on all resolutions which is set out in the Notice of the AGM. Members have the options to cast their votes on any resolutions using the remote e-voting facility or e-voting facility during the AGM. Detailed procedure for remote e-voting/e-voting during the AGM is provided in the Notice of the AGM. The remote e-voting period commences on **Thursday, September 17, 2026 from 9.00 a.m. (IST) and ends on Sunday, September 20, 2026 at 5.00 p.m. (IST)**. The remote e-voting module shall be disabled by NSDL thereafter. The Members who have cast their votes by remote e-voting on the resolutions prior to the AGM may attend/participate in the AGM through VC/OAVM but shall not be entitled to cast their votes on such resolutions again.

Any person holding shares in physical form or non-individual shareholders, who acquires equity shares of the Company and becomes a Member of the Company after sending of the Notice and holding equity shares as on the cut-off date, may obtain the User ID and Password for casting vote and attending the AGM, by sending a request at evoting@nsdl.com. However, if already registered with NSDL for remote e-Voting then they can use their existing User ID and password for casting the vote.

Individual shareholders holding securities in dematerialized mode and who acquire shares of the Company and becomes a Member of the Company after sending the Notice and holding shares as of the cut-off date may follow steps mentioned in Notice of the AGM.

The Board of Directors has appointed Mr. Vicky Kundaliya, (Membership No. FCS – 7716/ COP No. 10989), Proprietor of V. M. Kundaliya & Associates, Company Secretaries and failing him, M/s Shikha Purohit & Co, (Membership No. FCS - 9180 / COP No. 10237), Practising Company Secretaries as the Scrutinizer to scrutinize the e-voting process in a fair and transparent manner.

For details relating to e-Voting, please refer to the Notice of the AGM. In case of any queries related to e-voting, you may refer the FAQs for shareholders and e-voting user manual for shareholders available at the download section of https://www.evoting.nsdl.com or call on +91 22 48867000 or send the request to Ms. Pallavi Mhatre, DVP, NSDL at evoting@nsdl.com.

Helpdesk for individual shareholders holding securities in demat mode for any issues related to login through Depositories i.e. NSDL and CDSL:

Login Type	Helpdesk details - Members facing any issue in login can contact:
Securities held with NSDL	NSDL helpdesk by sending a request at evoting@nsdl.com or contact at +91 22 48867000
Securities held with CSDL	CDSL helpdesk by sending a request at helpdesk.evoting@cdslindia.com or contact at toll free no. 1800 21 09911

The Notice and the Annual Report for FY 2025-26 is available on the following websites: (a) Company - https://ikshealth.com/investor-relations/ (b) BSE Limited - www.bseindia.com (c) National Stock Exchange of India Limited - www.nseindia.com and (d) NSDL - https://www.evoting.nsdl.com

For **Inventurus Knowledge Solutions Limited**

Sd/-

Sameer Chavan

Company Secretary and Compliance Officer

Membership No. F7211

Place: Navi Mumbai

Date: August 29, 2026

ಪರೀಕ್ಷಾ ವ್ಯವಸ್ಥೆ ಸುಧಾರಣೆ ಹೇಗೆ?

ನಾಗರಿಕರೇ, ಸಲಹೆ ಕೊಡಿ ಎಂದ ಕೇಂದ್ರ ಸರಕಾರ | ಸೆ.13ರವರೆಗೆ ಅವಕಾಶ

ಹೊಸದಿಲ್ಲಿ: ದೇಶದಲ್ಲಿ ಪರೀಕ್ಷಾ ವ್ಯವಸ್ಥೆ ಸುಧಾರಣೆಗೆ ವಿದ್ಯಾರ್ಥಿಗಳು, ಪೋಷಕರು, ಶಿಕ್ಷಕರು, ಸಂಬಂಧಿಸಿದ ಪಾಲುದಾರರಿಂದ ಕೇಂದ್ರ ಸರಕಾರ ಸಲಹೆ ಆಹ್ವಾನಿಸಿದೆ.

ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ ನಡೆಸುವ ಪರೀಕ್ಷೆಗಳು ಸೇರಿದಂತೆ ಶಾಲಾ, ಕಾಲೇಜು ಪರೀಕ್ಷೆಗಳು, ನೇಮಕಾತಿ ಪರೀಕ್ಷೆಗಳ ನಿರ್ವಹಣೆ, ಭದ್ರತಾ ವ್ಯವಸ್ಥೆ, ವಿನ್ಯಾಸ ಮತ್ತಿತರ ಆಡಳಿತ ಸುಧಾರಣಾ ಅಂಶಗಳ ಕುರಿತು ಸಾರ್ವಜನಿಕರಿಂದ ಸಲಹೆ, ಸೂಚನೆಗಳನ್ನು ಆಹ್ವಾನಿಸಲಾಗಿದೆ.

ಪಾರದರ್ಶಕ ಸದೃಢವಾದ ಪರೀಕ್ಷಾ ವ್ಯವಸ್ಥೆ ನಿರ್ಮಾಣ, ಭವಿಷ್ಯದ ಅಗತ್ಯಗಳಿಗೆ ಅನುಗುಣವಾಗಿ ಸಾರ್ವಜನಿಕ ಪರೀಕ್ಷಾ ವ್ಯವಸ್ಥೆಯನ್ನು ಸುರಕ್ಷಿತಗೊಳಿಸುವ ಉದ್ದೇಶದಿಂದ ಸಾರ್ವಜನಿಕರು ಮುಖ್ಯವಾಗಿ ಮಕ್ಕಳು, ಪೋಷಕರು, ಶಿಕ್ಷಕರು, ಶಿಕ್ಷಣ ತಜ್ಞರಿಂದ ಸಲಹೆ ಆಹ್ವಾನಿಸಲಾಗಿದೆ.

ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ನಡೆಸುವ ಪರೀಕ್ಷೆಗಳು ಸೇರಿದಂತೆ ಸಾರ್ವಜನಿಕ ಪರೀಕ್ಷೆಗಳ ನಿರ್ವಹಣೆ, ಭದ್ರತೆ, ವಿನ್ಯಾಸದಲ್ಲಿ ಸಮಗ್ರ ಸುಧಾರಣೆಗೆ ನಂದನ್ ನಿಲೇಕಣಿ ನೇತೃತ್ವದಲ್ಲಿ ಉನ್ನತ ಮಟ್ಟದ ಕಾರ್ಯಪಡೆ ಸಾರ್ವಜನಿಕರ ಸಲಹೆ ಆಹ್ವಾನಿಸಿದೆ. ಸಾರ್ವಜನಿಕ ಸಮಾಲೋಚನೆ ಮೂಲಕ ಸ್ವೀಕರಿಸಲಾದ ಅಭಿಪ್ರಾಯಗಳು, ಸಲಹೆಗಳನ್ನು ಪರೀಕ್ಷಾ ವ್ಯವಸ್ಥೆಯ ಸುಧಾರಣೆಗಳ ಕುರಿತು ಶಿಫಾರಸು ರೂಪಿಸಲು ಉನ್ನತ ಮಟ್ಟದ ಕಾರ್ಯಪಡೆ ಬಳಸಿಕೊಳ್ಳಲಿದೆ.

ಯಾರು ಸಲಹೆ ಸಲ್ಲಿಸಬಹುದು?

ವಿದ್ಯಾರ್ಥಿಗಳು ಅಥವಾ ಅಭ್ಯರ್ಥಿಗಳು, ಪೋಷಕರು, ಶಿಕ್ಷಕರು, ಶೈಕ್ಷಣಿಕ ಸಂಸ್ಥೆಗಳು, ಪರೀಕ್ಷೆಗಳನ್ನು ನಡೆಸುವ ಹಾಗೂ ಪರೀಕ್ಷೆಗಳನ್ನು ಆಯೋಜಿಸುವ ಸಂಸ್ಥೆಗಳು, ವಿಷಯ ತಜ್ಞರು, ತಂತ್ರಜ್ಞಾನ ವೃತ್ತಿಪರರು, ಕೈಗಾರಿಕಾ ಸಂಘಟನೆಗಳು ಹಾಗೂ ನಾಗರಿಕ ಸಮಾಜದ ಸಂಘಟನೆಗಳು ಸಲಹೆಗಳು ಸಲ್ಲಿಸಬಹುದಾಗಿದೆ. ಸಾರ್ವಜನಿಕ ಪರೀಕ್ಷೆಗಳ ನಡವಳಿಕೆ, ಭದ್ರತಾ ವ್ಯವಸ್ಥೆ, ಪರೀಕ್ಷಾ ವಿನ್ಯಾಸ, ಮೌಲ್ಯಮಾಪನ ವಿಧಾನ, ಆಡಳಿತ ಮತ್ತು ಹೊಣೆಗಾರಿಕೆ ಸ್ವರೂಪ, ಸಾಂಸ್ಥಿಕ ವ್ಯವಸ್ಥೆಯ ಸುಧಾರಣೆಗೆ ಸಂಬಂಧಿಸಿದಂತೆ ಸಲಹೆ-ಸೂಚನೆ ನೀಡಬಹುದಾಗಿದೆ.

ಪರೀಕ್ಷಾ ಅಕ್ರಮಗಳನ್ನು ತಡೆಗಟ್ಟುವುದು, ಅಕ್ರಮ ಪತ್ತೆಹಚ್ಚುವ ಕಾರ್ಯ ವಿಧಾನ, ಪರೀಕ್ಷಾ ನಿರ್ವಹಣೆ, ವಿನ್ಯಾಸ, ಮೌಲ್ಯಮಾಪನ ವಿಧಾನ, ಪರೀಕ್ಷಾ ಮೌಲಸೌಕರ್ಯಗಳ ಸೃಷ್ಟಿ, ಸುರಕ್ಷಿತ ಕಂಪ್ಯೂಟರ್ ಆಧಾರಿತ ಪರೀಕ್ಷೆಗೆ ತಂತ್ರಜ್ಞಾನದ ಬಳಕೆ, ಪರೀಕ್ಷಾ ವ್ಯವಸ್ಥೆಗೆ ಮೌಲ್ಯ ಒದಗಿಸಬಲ್ಲ ಯಾವುದೇ ಕ್ರಮಗಳ ಕುರಿತಂತೆ ಸಲಹೆ ನೀಡುವಂತೆ ಕೋರಲಾಗಿದೆ.

ಸಲಹೆ-ಸೂಚನೆಗಳನ್ನು ಸೆ.13ರ ಒಳಗೆ ಟಾಸ್ಕ್‌ಫೋರ್ಸ್‌ನ ವೆಬ್‌ಸೈಟ್ examreforms-taskforce.dopt.gov.in, ವಾಟ್ಸ್ಆ್ಯಪ್ ಸಂಖ್ಯೆ 78270 42830 ಅಥವಾ Exam ReformsTaskforce@dopt.gov.in ಗೆ ಇ-ಮೇಲ್ ಮಾಡಬಹುದಾಗಿದೆ.

ಭಾರತೀಯ ಸೇನೆಗೆ ಅಮೆರಿಕದ ಜಾವೆಲಿನ್

45.7 ದಶಲಕ್ಷ ಡಾಲರ್ ಮೌಲ್ಯದ ಖರೀದಿ ಒಪ್ಪಂದ

ಹೊಸದಿಲ್ಲಿ: ಅಮೆರಿಕದ ಯುದ್ಧ ಟ್ಯಾಂಕ್ ನಿಗ್ರಹ ಶಸ್ತ್ರಾಸ್ತ್ರ ವ್ಯವಸ್ಥೆ ಹೊಂದಿದ ಜಾವೆಲಿನ್ ಕ್ಷಿಪಣಿ ಖರೀದಿಗೆ ಭಾರತ ಸಹಿ ಹಾಕಿದೆ. ಸುಮಾರು 45.7 ದಶಲಕ್ಷ ಡಾಲರ್ ಮೌಲ್ಯದ ಖರೀದಿ ಒಪ್ಪಂದಕ್ಕೆ ಅಮೆರಿಕದ ವಿದೇಶಾಂಗ ಇಲಾಖೆ ಅನುಮೋದನೆ ನೀಡಿದೆ.

ರಕ್ಷಣಾ ಸಹಕಾರ ಒಪ್ಪಂದ ಅಡಿಯಲ್ಲಿ ಜಾವೆಲಿನ್ ಕ್ಷಿಪಣಿ ಪೂರೈಸುವಂತೆ ಭಾರತದ ಮನವಿಯನ್ನು ಪುರಸ್ಕರಿಸಿರುವ ವಿದೇಶಾಂಗ ಇಲಾಖೆ, ವಿದೇಶಿ ಮಿಲಿಟರಿ ಮಾರಾಟ ಪ್ರಕ್ರಿಯೆ ಅಡಿಯಲ್ಲಿ ಮಾರಾಟಕ್ಕೆ ಅನುಮೋದನೆ ನೀಡಿದೆ. ''ಅಮೆರಿಕದ ವಿದೇಶಿ ಮಿಲಿಟರಿ ಮಾರಾಟ ಪ್ರಕ್ರಿಯೆಯ ಮೂಲಕ ಯುದ್ಧ ಟ್ಯಾಂಕ್-ನಿಗ್ರಹ ಜಾವೆಲಿನ್ ಕ್ಷಿಪಣಿ ವ್ಯವಸ್ಥೆಯನ್ನು ಖರೀದಿಸಲು ಭಾರತೀಯ ಸೇನೆ 'ಆಫರ್ ಮತ್ತು ಸ್ವೀಕಾರ ಪತ್ರ' ಸಹಿ ಹಾಕಿದೆ,'' ಎಂದು ಅಮೆರಿಕದ ರಾಯಭಾರ ಕಚೇರಿ ಶುಕ್ರವಾರ ತಿಳಿಸಿದೆ. ''ಜಾವೆಲಿನ್ ಕ್ಷಿಪಣಿ ಖರೀದಿ ಒಪ್ಪಂದ ಭಾರತ ಮತ್ತು ಅಮೆರಿಕದ ರಕ್ಷಣಾ ಉದ್ಯಮಗಳ ನಡುವೆ ಹೆಚ್ಚಿನ ಸಹಕಾರ ವೃದ್ಧಿಸಲಿದೆ. ಸಂಭಾವ್ಯ ಸಹ-ಉತ್ಪಾದನೆಗೆ ಅವಕಾಶಗಳನ್ನು ಸೃಷ್ಟಿಸಬಲ್ಲದು,'' ಎಂದು ಭಾರತದಲ್ಲಿರುವ ಅಮೆರಿಕ ರಾಯಭಾರಿ ಸರ್ಗಿಯೊ ಗೋರ್ ಹೇಳಿದ್ದಾರೆ.

ಜಾವೆಲಿನ್ ಕ್ಷಿಪಣಿ ವ್ಯವಸ್ಥೆ: ಎಫ್‌ಎಂಜಿ-148 ಜಾವೆಲಿನ್ ಕ್ಷಿಪಣಿ ಒಬ್ಬ ವ್ಯಕ್ತಿ ಸುಲಭವಾಗಿ ಕೊಂಡೊಯ್ಯಬಹುದಾದ ಮಧ್ಯಮ ಶ್ರೇಣಿಯ ಟ್ಯಾಂಕ್ ನಿಗ್ರಹ ಮಾರ್ಗದರ್ಶಿ ಕ್ಷಿಪಣಿ ವ್ಯವಸ್ಥೆಯಾಗಿದೆ.

ಶಸ್ತ್ರಸಜ್ಜಿತ ವಾಹನಗಳು, ಕೋಟೆಗಳು, ಬಂಕರ್‌ಗಳು, ಕಟ್ಟಡಗಳು ಸೇರಿದಂತೆ ಯಾವುದೇ ಸ್ಥಳದಿಂದ ಉಡಾವಣೆ ಮಾಡಬಹುದಾಗಿದ್ದು, ವ್ಯಾಪಕ ಶ್ರೇಣಿಯ ಗುರಿಗಳನ್ನು ನಿಗ್ರಹಿಸುವ ರೀತಿಯಲ್ಲಿ ವಿನ್ಯಾಸಗೊಳಿಸಲಾಗಿದೆ. ಮುಖ್ಯವಾಗಿ ಕರಾವಳಿ ತೀರ ರಕ್ಷಣೆಯಲ್ಲಿ ಬಳಸಲಾಗುತ್ತದೆ. ಭೂಮಿ ಮತ್ತು ಸಮುದ್ರದಲ್ಲಿ ಸಂಭವನೀಯ ಅಪಾಯ ನಿಗ್ರಹಿಸಲು ಜಾವೆಲಿನ್ ಕ್ಷಿಪಣಿಗಳನ್ನು ಹೆಚ್ಚಾಗಿ ಬಳಸಲಾಗುತ್ತದೆ.

ಅಮೆರಿಕದ ಸೇನೆಗಾಗಿ ಜಾವೆಲಿನ್ ಜಾಯಿಂಟ್ ವೆಂಚರ್ಸ್ ಮೂಲಕ ಲಾಕ್‌ಹೀಡ್ ಮಾರ್ಟಿನ್ ಹಾಗೂ ಆರ್‌ಟಿಎಕ್ಸ್ ಜಂಟಿಯಾಗಿ ಜಾವೆಲಿನ್ ಕ್ಷಿಪಣಿಯನ್ನು ಅಭಿವೃದ್ಧಿಪಡಿಸಿವೆ. ಮರುಬಳಕೆ ಮಾಡಬಹುದಾದ 'ಕಮಾಂಡ್ ಲಾಂಚ್ ಯೂನಿಟ್' ಹೊಂದಿದೆ. ಲಾಂಚ್ ಟ್ಯೂಬ್ ನಲ್ಲಿರುವ ಕ್ಷಿಪಣಿ ಸೇರಿದಂತೆ ಸಂಪೂರ್ಣ ವ್ಯವಸ್ಥೆ 22.3 ಕೆಜಿ ತೂಕ ಹೊಂದಿದೆ. ಕ್ಷಿಪಣಿಯ ಮಾದರಿಯನ್ನು ಅವಲಂಬಿಸಿ ಜಾವೆಲಿನ್ ಸುಮಾರು 2,500 ರಿಂದ 4,000 ಮೀಟರ್ ದೂರದ ಗುರಿಯನ್ನು ಪರಿಣಾಮಕಾರಿ ತಲುಪುವ ಶಕ್ತಿ ಹೊಂದಿದೆ.

ಹೇಗೆ ಕಾರ್ಯ ನಿರ್ವಹಣೆ?

ಜಾವೆಲಿನ್ ಕ್ಷಿಪಣಿ ಇಮೇಜಿಂಗ್ ಇನ್ಫ್ರಾರೆಡ್ (ಐಐಆರ್) ಸೀಕರ್ ಮತ್ತು ಸ್ವಾಯತ್ತ ಫೈರ್ ಅಂಡ್ ಫರ್ಗೆಟ್ ಮಾರ್ಗದರ್ಶನ ವ್ಯವಸ್ಥೆಯೊಂದಿಗೆ ಕಾರ್ಯ ನಿರ್ವಹುಸುತ್ತದೆ. ಆಪರೇಟರ್‌ಗಳು ಗುರಿಯನ್ನು ಲಾಕ್ ಮಾಡಿ ಕ್ಷಿಪಣಿಯನ್ನು ಉಡಾಯಿಸಿದ ನಂತರ ಸ್ವತಂತ್ರವಾಗಿ ಕಾರ್ಯ ನಿರ್ವಹಿಸುತ್ತದೆ. ಉದ್ದೇಶಿತ ಗುರಿಯತ್ತ ಕ್ಷಿಪಣಿ ಸ್ವಯಂ ಮಾರ್ಗದರ್ಶನದಲ್ಲಿ ಮುನ್ನುಗ್ಗುತ್ತದೆ. ಒಂದು ಕ್ಷಿಪಣಿ ಉಡಾವಣೆ ಮಾಡಿದ ಆಪರೇಟರ್, ತಕ್ಷಣವೇ ಎದುರಾಳಿಯ ಮತ್ತೊಂದು ಗುರಿಯ ಮೇಲೆ ಕೇಂದ್ರೀಕರಿಸಲು ಅವಕಾಶ ನೀಡುತ್ತದೆ. ಅಥವಾ ಶತ್ರುಗಳ ಚಲನವಲನ ಆಧರಿಸಿ ಅಡಗಿಕೊಳ್ಳಲು, ಹೊಸ ಬೆದರಿಕೆಯನ್ನು ನಿಗ್ರಹಿಸಲು ಮತ್ತೊಂದು ಕ್ಷಿಪಣಿ ಉಡಾವಣೆಗೆ ಸಜ್ಜಾಗಲು ಅನುವು ಮಾಡಿಕೊಡುತ್ತದೆ. ಒಬ್ಬ ವ್ಯಕ್ತಿಯ ಭುಜದ ಮೇಲಿಂದಲೂ ಉಡಾವಣೆ ಮಾಡುವ ರೀತಿಯಲ್ಲಿ ವಿನ್ಯಾಸಗೊಳಿಸಲಾಗಿದೆ.

ವಿಕ ಈ ದಿನ ವಿಶೇಷ | ಆಗಸ್ಟ್ 29

ಜನುಮ ದಿನ

ರಾಮಕೃಷ್ಣ ಹೆಗಡೆ

- ಮೌಲ್ಯಾಧಾರಿತ ರಾಜಕಾರಣದ ಪರಿಕಲ್ಪನೆ ನೀಡಿದ ಅಪರೂಪದ ಮುತ್ಸದ್ದಿ ರಾಜಕಾರಣಿ ರಾಮಕೃಷ್ಣ ಹೆಗಡೆ ಅವರು 1926ರ ಆಗಸ್ಟ್ 29ರಂದು ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರದ ದೊಡ್ಮನೆಯಲ್ಲಿ ಜನಿಸಿದರು. ರಾಜ್ಯದ ಮೊದಲ ಕಾಂಗ್ರೆಸ್ಸೇತರ ಮುಖ್ಯಮಂತ್ರಿ ಎಂಬ ಹಿರಿಮೆ ಹೊಂದಿದ್ದ ಅವರು 1983- 1988ರ ಅವಧಿಯಲ್ಲಿ ಮುಖ್ಯಮಂತ್ರಿ ಯಾಗಿದ್ದರು. 2004ರ ಜ.12ರಂದು ನಿಧನರಾದರು.

ಕೇಜ್ರಿವಾಲ್‌ಗಿಂತ ದೀಪ್ಕೆಗೆ ಹೆಚ್ಚು ಜನ ಬೆಂಬಲ

ಹೊಸದಿಲ್ಲಿ: ಖಾಸಗಿ ಸುದ್ದಿಸಂಸ್ಥೆ ನಡೆಸಿದ 'ಮೂಡ್ ಆಫ್ ದೀ ನೇಷನ್' ಸಮೀಕ್ಷೆಯಲ್ಲಿ ಪ್ರಧಾನಿ ಹುದ್ದೆ ಆಯ್ಕೆ ವಿಷಯದಲ್ಲಿ ಕಾಕ್ರೋಚ್ ಜನತಾ ಪಾರ್ಟಿ ಸಂಸ್ಥಾಪಕ ಅಭಿಜಿತ್ ದೀಪ್ಕೆ ಅವರು ಆಮ್ ಆದ್ಮಿ ಪಕ್ಷದ ಸಂಚಾಲಕ ಅರವಿಂದ್ ಕೇಜ್ರಿವಾಲ್ ಅವರನ್ನು ಹಿಂದಿಕ್ಕಿದ್ದಾರೆ. ಒಂದು ಕಾಲದಲ್ಲಿ ಕೇಜ್ರಿವಾಲ್ ಆಪ್ತ ವಲಯದಲ್ಲಿದ್ದ ದೀಪ್ಕೆ, ಇತ್ತೀಚೆಗೆ ಸಿ-ವೋಟರ್ ನಡೆಸಿದ ಸಮೀಕ್ಷೆಯಲ್ಲಿ ಪ್ರಧಾನಿ ಹುದ್ದೆಯ ಆಯ್ಕೆ ವಿಷಯದಲ್ಲಿ ಮುನ್ನಡೆ ಕಾಯ್ದುಕೊಂಡಿದ್ದಾರೆ. ದೀಪ್ಕೆ ಅವರು ಉತ್ತಮ ಆಯ್ಕೆ ಎಂದು ಶೇ.1.3ರಷ್ಟು ಮಂದಿ ಅಭಿಪ್ರಾಯ ವ್ಯಕ್ತಪಡಿಸಿದರೆ, ಶೇ.1.2ರಷ್ಟು ಮಂದಿ ಕೇಜ್ರಿವಾಲ್ ಆಯ್ಕೆ ಬಯಸಿದ್ದಾರೆ. ಸಮೀಕ್ಷೆಯಲ್ಲಿ ಪ್ರಧಾನಿ ನರೇಂದ್ರ ಮೋದಿ (47.8) ಮೊದಲ ಸ್ಥಾನದಲ್ಲಿದ್ದರೆ, ರಾಹುಲ್ (27.1) ಎರಡು, ತಮಿಳುನಾಡು ಸಿಎಂ ವಿಜಯ್ (9.2) ಮೂರನೇ ಸ್ಥಾನದಲ್ಲಿದ್ದಾರೆ.

ರಾಹುಲ್ ವಿರುದ್ಧ ನಾಜಿಯಾ ದೂರು

ಹೊಸದಿಲ್ಲಿ: 'ಛಾತ್ರೋಂ ಕಿ ಗೂಂಜ್' ಕಾರ್ಯಕ್ರಮದಲ್ಲಿ ಮನುಸ್ಮೃತಿ ಕುರಿತು ನೀಡಿದ ಹೇಳಿಕೆಗೆ ಸಂಬಂಧಿಸಿದಂತೆ ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ವಿರುದ್ಧ ಸುಪ್ರೀಂ ಕೋರ್ಟ್ ವಕೀಲೆ ನಾಜಿಯಾ ಖಾನ್ ದೂರು ದಾಖಲಿಸಿದ್ದಾರೆ. ಪ್ರಾಚೀನ ಗ್ರಂಥದಿಂದ ಆಯ್ದ ಭಾಗಗಳನ್ನು ಮಾತ್ರ ಎತ್ತಿಹಿಡಿದು, ಅದನ್ನು ತಿರುಚಿ ಪ್ರಸ್ತುತಪಡಿಸುವ ಮೂಲಕ ಮನುಸ್ಮೃತಿಗೆ ಕಳಂಕ ತರಲಾಗಿದೆ ಎಂದು ಅವರು ದೂರಿನಲ್ಲಿ ಆರೋಪಿಸಿದ್ದಾರೆ. ''ನಾನು ಕಲ್ಮಾ ಮತ್ತು ಶಹಾದಾ ಎರಡನ್ನೂ ಪಠಿಸುತ್ತೇನೆ. ಜೊತೆಗೆ 'ವಂದೇ ಮಾತರಂ' ಹಾಡುವಾಗ ನಾನೊಬ್ಬಳು ಖಾನ್ ಆಗಿದ್ದರೂ ನನ್ನ ಬಗ್ಗೆ ನನಗೆ ಅಪಾರ ಹೆಮ್ಮೆ ಅನಿಸುತ್ತದೆ. ರಾಹುಲ್ ಗಾಂಧಿ ಕೇವಲ ಒಂದೇ ಅಧ್ಯಾಯವನ್ನು ಆಯ್ದುಕೊಂಡು, ಪದಗಳನ್ನು ತಿರುಚಿ, ಮನುಸ್ಮೃತಿಗೆ ಅಪಖ್ಯಾತಿ ತರುವ ಮತ್ತು ತಪ್ಪು ಅಭಿಪ್ರಾಯ ಸೃಷ್ಟಿಸುವ ಪ್ರಯತ್ನ ಮಾಡಿದ್ದಾರೆ,'' ಎಂದು ನಾಜಿಯಾ ಖಾನ್ ಕಿಡಿಕಾರಿದ್ದಾರೆ.

ನಮೋ ರಾಖಿ ಸಂಭ್ರಮ

ಹೊಸದಿಲ್ಲಿಯಲ್ಲಿ ಶುಕ್ರವಾರ ರಕ್ಷಾ ಬಂಧನವನ್ನು ವಿವಿಧ ಶಾಲೆಗಳ ಚಿಣ್ಣರೊಂದಿಗೆ ಆಚರಿಸಿದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ರಾಖಿ ಕಟ್ಟಿ ಮುತ್ತಿಕ್ಕಿದ ಬಾಲಕಿ.

ಸೋನಿಯಾ ಗಾಂಧಿ ಆತ್ಮಕಥೆಯ ರಾಜಕೀಯ ಜಟಾಪಟಿ

ಹೊಸದಿಲ್ಲಿ: ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರ ಆತ್ಮಕಥೆ 'ಬಿಲಾಂಗಿಂಗ್: ಎ ಜರ್ನಿ ಆಫ್ ಲವ್ ಇನ್ ಇಂಡಿಯಾ' ಕೃತಿಯನ್ನು ಪ್ರಕಟಿಸಲು ಪ್ರಕಾಶಕ ಸಂಸ್ಥೆ ಪೆಂಗ್ವಿನ್ ರ‍್ಯಾಂಡಮ್ ಹೌಸ್ ಇಂಡಿಯಾ ನಿರಾಕರಿಸಿದೆ ಎಂಬ ವರದಿ ರಾಜಕೀಯ ಜಟಾಪಟಿಗೆ ಕಾರಣವಾಗಿದೆ.

ಪ್ರಧಾನಿ ನರೇಂದ್ರ ಮೋದಿ, ಆರ್‌ಎಸ್‌ಎಸ್, ಭಾರತದ ಭೂಭಾಗವನ್ನು ಅತಿಕ್ರಮಿಸಿದ ಚೀನಾ ವಿಷಯ ಕುರಿತು ಪಠ್ಯಗಳನ್ನು ತೆಗೆದು ಹಾಕುವಂತೆ ಪ್ರಕಾಶಕ ಸಂಸ್ಥೆ ಒತ್ತಡ ಹೇರಿದೆ ಎಂದು ಕಾಂಗ್ರೆಸ್ ನಾಯಕರು ತಿಳಿಸಿದ್ದಾರೆ. ''ಸರಕಾರದ ಒತ್ತಡದಿಂದ ಪೆಂಗ್ವಿನ್ ಇಂಡಿಯಾ ಸಂಸ್ಥೆ ಪುಸ್ತಕ ಪ್ರಕಟಣೆಯಿಂದ ಹಿಂದೆ ಸರಿದಿದೆ. ಈ ಬೆಳವಣಿಗೆ ಪ್ರಜಾಪ್ರಭುತ್ವದ ಹತ್ಯೆಯಾಗಿದೆ. ಅಭಿವ್ಯಕ್ತಿ ಸ್ವಾತಂತ್ರ್ಯದ ಕಗ್ಗೊಲೆ ಯಾಗಿದೆ,'' ಎಂದು ಕಾಂಗ್ರೆಸ್ ನಾಯಕರು ಆರೋಪಿಸಿದ್ದಾರೆ.

''ಭಾರತದಲ್ಲಿ ಸೋನಿಯಾ ಗಾಂಧಿ ಅವರ ಆತ್ಮಕಥೆಯನ್ನು ಪ್ರಕಟಿಸಲು ಪ್ರಕಾಶಕರು ನಿರಾಕರಿಸಿದ ವಿಷಯ ತೀವ್ರ ಕಳವಳಕಾರಿಯಾದ ಸಂಗತಿಯಾಗಿದೆ. ಪ್ರಕಾಶಕ ಸಂಸ್ಥೆ ಸ್ವತಂತ್ರವಾಗಿ ನಿರ್ಧಾರ ತೆಗೆದುಕೊಂಡಿದೆಯೇ,'' ಎಂದು ಕಿಡಿಕಾರಿರುವ ಮಧ್ಯಪ್ರದೇಶ ಮಾಜಿ ಸಿಎಂ ಕಮಲ್‌ನಾಥ್, ''ಲೇಖಕರಾದ ಸೋನಿಯಾ ಗಾಂಧಿ ಏನು ಬರೆಯಬೇಕು, ಏನು ಬರೆಯಬಾರದು ಎಂಬುದನ್ನು ಪ್ರಕಾಶಕರು ನಿರ್ಧರಿಸುತ್ತಾರೆಯೇ? ಅಥವಾ ಪ್ರಕಾಶಕರ ಮೇಲೆ ಯಾರಾದರೂ ಒತ್ತಡ ಹೇರುತ್ತಿದ್ದಾರೆಯೇ,'' ಎಂದು ಪ್ರಶ್ನೆ ಮಾಡಿದ್ದಾರೆ.



ಬಿಜೆಪಿ ತಿರುಗೇಟು: ಪ್ರಕಾಶಕ ಸಂಸ್ಥೆ ಪೆಂಗ್ವಿನ್ ಹಾಗೂ ಕೇಂದ್ರ ಸರಕಾರದ ವಿರುದ್ಧ ಮುಗಿಬಿದ್ದ ಕಾಂಗ್ರೆಸ್ ನಾಯಕರಿಗೆ ತಿರುಗೇಟು ನೀಡಿರುವ ಬಿಜೆಪಿ ನಾಯಕ ಅಮಿತ್ ಮಾಳವೀಯ, ''ಸ್ವತಃ ಸೋನಿಯಾ ಗಾಂಧಿ ಅವರೇ ಬರೆದ ಆತ್ಮಕಥೆ ಪುಸ್ತಕದ ವಸ್ತುವಿಷಯದ ಸತ್ಯಾಸತ್ಯತೆ ಪರಿಶೀಲಿಸುವಂತೆ ಪ್ರಕಾಶಕ ಸಂಸ್ಥೆ ಹೇಳಿರುವುದು ಕುತೂಹಲಕಾರಿಯಾಗಿದೆ,'' ಎಂದು ಹೇಳಿದ್ದಾರೆ. ''ಆತ್ಮಕಥೆಯ ಸತ್ಯಾಸತ್ಯತೆಯ ದೃಷ್ಟಿಯಿಂದ ಪರಿಶೀಲಿಸಬೇಕಾದ ಪರಿಸ್ಥಿತಿ ಎದುರಾದಾಗ, ಸಹಜವಾಗಿಯೇ ಒಂದು ಪ್ರಶ್ನೆ ಉದ್ಭವಿಸುತ್ತದೆ. ವಾಸ್ತವವಾಗಿ ಅಲ್ಲಿ ಪರಿಶೀಲಿಸಬೇಕಾದದ್ದು ಏನಿದೆ? ಲೇಖಕರ ನೆನಪುಗಳನ್ನೇ ಅಥವಾ ಸತ್ಯ ಮತ್ತು ಕಲ್ಪನೆಯ ನಡುವಿನ ಅಸ್ಪಷ್ಟ ಗೆರೆಯನ್ನೇ,'' ಎಂದು ಮಾಳವೀಯ ಪ್ರಶ್ನಿಸಿದ್ದಾರೆ.

ಸಂಪಾದಕೀಯ ಬದಲಾವಣೆ ನೀಡಿದ ಸಲಹೆಗಳನ್ನು ಸ್ವೀಕರಿಸಲು ಲೇಖಕರು ನಿರಾಕರಿಸಿದ ಕಾರಣದಿಂದ 'ಬಿಲಾಂಗಿಂಗ್: ಎ ಜರ್ನಿ ಆಫ್ ಲವ್ ಇನ್ ಇಂಡಿಯಾ' ಪುಸ್ತಕವನ್ನು ಪ್ರಕಟಿಸದಿರಲು ಪೆಂಗ್ವಿನ್ ರ‍್ಯಾಂಡಮ್ ಹೌಸ್ ಇಂಡಿಯಾ ನಿರ್ಧರಿಸಿದೆ ಎಂದು ಹೇಳಲಾಗಿದೆ.

ಸಚಿವರ ಮುಂದೆ ಕೊಡಗಿನ ಸಮಸ್ಯೆಗಳ ಮಹಾಪೂರ

ವನ್ಯಜೀವಿ-ಮಾನವ ಸಂಘರ್ಷ, ಕಸ್ತೂರಿರಂಗನ್ ವರದಿ ಕುರಿತು ಚರ್ಚೆ | ಅರಣ್ಯ ಇಲಾಖೆ ಕಾರ್ಯ ವೈಖರಿ ವಿರುದ್ಧ ಸಂಘಟನೆಗಳ ಆಕ್ರೋಶ

■ **ವಿಕ ಸುದ್ದಿಲೋಕ** ಮಡಿಕೇರಿ

ಅರಣ್ಯ ಸಚಿವರಾಗಿ ಅಧಿಕಾರ ಸ್ವೀಕರಿಸಿದ ಬಳಿಕ ಇದೇ ಮೊದಲ ಬಾರಿಗೆ ಕೊಡಗು ಜಿಲ್ಲೆಗೆ ಭೇಟಿ ನೀಡಿದ ರಾಮಲಿಂಗಾ ರೆಡ್ಡಿ ಅವರ ಮುಂದೆ ಜಿಲ್ಲೆಯ ವಿವಿಧ ಸಂಘಟನೆಗಳು, ಕಾಫಿ ಬೆಳೆಗಾರರು ಹಾಗೂ ತೋಟದ ಮಾಲೀಕರು ಕೊಡಗಿನ ಪ್ರಮುಖ ಸಮಸ್ಯೆಗಳ ಕುರಿತು ಗಮನ ಸೆಳೆದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ನಡೆದ ಮಾನವ-ವನ್ಯಜೀವಿ ಸಂಘರ್ಷಕ್ಕೆ ಸಂಬಂಧಿಸಿದ ಸಭೆಯಲ್ಲಿ ಅರಣ್ಯ ಇಲಾಖೆಯ ಕಾರ್ಯವೈಖರಿ ವಿರುದ್ಧ ಹಲವು ಸಂಘಟನೆಗಳ ಪ್ರಮುಖರು ಅಸಮಾಧಾನ ವ್ಯಕ್ತಪಡಿಸಿದರು.

ಜಿಲ್ಲೆಯ ಸುಮಾರು 16 ಸಂಘಟನೆಗಳು ಅರಣ್ಯ ಸಚಿವರಿಗೆ ಮನವಿ ಸಲ್ಲಿಸಿ, ಆನೆ-ಮಾನವ ಸಂಘರ್ಷ, ವನ್ಯಜೀವಿ ಹಾವಳಿ, ಸಿ ಮತ್ತು ಡಿ ಲ್ಯಾಂಡ್ ಸಮಸ್ಯೆ, ಹಾರಂಗಿ ಹಿನ್ನೀರಿನ ಪ್ರದೇಶದ ಭೂ ಸಮಸ್ಯೆ, ಕಾಫಿ ತೋಟಗಳಲ್ಲಿ ಮರ ಕಡಿತಕ್ಕೆ ಅರಣ್ಯ ಇಲಾಖೆ ನೀಡುತ್ತಿರುವ ತೊಂದರೆ, ಅರಣ್ಯ ಪ್ರದೇಶದಲ್ಲಿ ವಾಸಿಸುವವರಿಗೆ ಹಕ್ಕುಪತ್ರ ನಿರಾಕರಣೆ ಹಾಗೂ ವನ್ಯಜೀವಿಗಳಿಂದ ಬೆಳೆಗಳಿಗೆ ಉಂಟಾಗುವ ನಷ್ಟಕ್ಕೆ ಪರಿಹಾರ ನೀಡುವಲ್ಲಿ ವಿಳಂಬ ಸೇರಿದಂತೆ ಹಲವು ಸಮಸ್ಯೆಗಳನ್ನು ಸಚಿವರ ಗಮನಕ್ಕೆ ತಂದರು.

ಆನೆಗಳಿಗೆ ಕಾಡಿನಲ್ಲೇ ಆಹಾರ, ನೀರು ಕಲ್ಪಿಸಿ: ಸಭೆಯ ಆರಂಭದಲ್ಲಿ ಮಾತನಾಡಿದ ಮಾಜಿ ವಿಧಾನಸಭಾಧ್ಯಕ್ಷ ಕೆ.ಜಿ.ಬೋಪಯ್ಯ, ''ಕಾಡಿನಲ್ಲಿ ಆನೆ ಸೇರಿದಂತೆ ವನ್ಯಜೀವಿಗಳಿಗೆ ಆಹಾರ ಮತ್ತು ನೀರಿನ ಕೊರತೆಯಾಗುತ್ತಿರುವುದರಿಂದ ಅವು ನಾಡಿನತ್ತ ಬರುತ್ತಿವೆ. ವನ್ಯಜೀವಿಗಳಿಗೆ ಅನುಕೂಲವಾಗುವ ಸಸ್ಯಗಳನ್ನು ಬೆಳೆಸಬೇಕು,'' ಎಂದು ಸಲಹೆ ನೀಡಿದರು.

''ರೈಲ್ವೆ ಬ್ಯಾರಿಕೇಡ್ ಕಾಮಗಾರಿಯನ್ನು ಸಮರ್ಪಕವಾಗಿ ಕೈಗೊಳ್ಳಬೇಕು. ಕೆಲವು ಆನೆಗಳನ್ನು ಪದೇಪದೆ ಓಡಿಸುವ ಬದಲು ಅವುಗಳನ್ನು ಹಿಡಿದು ಸುರಕ್ಷಿತ ಪ್ರದೇಶಗಳಿಗೆ ಸ್ಥಳಾಂತರಿಸುವುದು ಸೂಕ್ತ,'' ಎಂದು ಅಭಿಪ್ರಾಯಪಟ್ಟರು.

''ಸಿ ಮತ್ತು ಡಿ ಲ್ಯಾಂಡ್ ವಿಚಾರದಲ್ಲಿ ಅರಣ್ಯ ಇಲಾಖೆ ಅನಗತ್ಯವಾಗಿ ಮಧ್ಯಪ್ರವೇಶಿಸುತ್ತಿದ್ದು, ಈ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಬೇಕು,'' ಎಂದು ಸಚಿವರಿಗೆ ಮನವಿ ಮಾಡಿದರು.

ರಾಜಕೀಯ ಬೇಡವೆಂದ ಸಚಿವ: ಬಿಜೆಪಿ ಮುಖಂಡ ಸುವೀನ್ ಗಣಪತಿ ಅವರು ಕಾಂಗ್ರೆಸ್ ಸರಕಾರದ ಅವಧಿಯಲ್ಲಿ ಆನೆ-ಮಾನವ ಸಂಘರ್ಷದಿಂದ ಹೆಚ್ಚಿನ ಸಾವುಗಳು ಸಂಭವಿಸಿವೆ ಎಂದು ಹೇಳಿದಾಗ ಶಾಸಕ ಎ.ಎಸ್.ಪೊನ್ನಣ್ಣ ಹಾಗೂ ಡಾ.ಮಂತರ್ ಗೌಡ ಆಕ್ಷೇಪ ವ್ಯಕ್ತಪಡಿಸಿದರು.

''ಮೂರು ವರ್ಷಗಳ ಹಿಂದೆ ಇದ್ದ ಬಿಜೆಪಿ ಸರಕಾರದ ಅವಧಿಯಲ್ಲೂ ಆನೆ-ಮಾನವ ಸಂಘರ್ಷದಿಂದ ಸಾವುಗಳು ಸಂಭವಿಸಿವೆ. ಲೆಕ್ಕಾಚಾರ ತೆಗೆದರೆ ನಾವು ಕೂಡ ಲೆಕ್ಕಾಚಾರ ನೀಡಬೇಕಾಗುತ್ತದೆ,'' ಎಂದು ಶಾಸಕರು ತಿರುಗೇಟು ನೀಡಿದರು.

ಮಾನವ-ವನ್ಯಜೀವಿ ಸಂಘರ್ಷಕ್ಕೆ ಸಂಬಂಧಿಸಿದಂತೆ ಮಡಿಕೇರಿಯಲ್ಲಿ ಜನಪ್ರತಿನಿಧಿಗಳು, ಸಂಘಟನೆಗಳು ಹಾಗೂ ಅರಣ್ಯ ಅಧಿಕಾರಿಗಳೊಂದಿಗೆ ಅರಣ್ಯ ಸಚಿವ ರಾಮಲಿಂಗಾ ರೆಡ್ಡಿ ಸಭೆ ನಡೆಸಿದರು.

ಕಸ್ತೂರಿರಂಗನ್ ವರದಿಗೆ ಸರಕಾರದ ವಿರೋಧ: ಸಚಿವ

ಕೊಡಗಿನ ಪ್ರಮುಖ ಸಮಸ್ಯೆಗಳ ಬಗ್ಗೆ ಸರಕಾರಕ್ಕೆ ಮನವರಿಕೆ ಮಾಡಿಕೊಟ್ಟು ಪರಿಹಾರ ಕಂಡುಕೊಳ್ಳಲು ಕ್ರಮ ಕೈಗೊಳ್ಳಲಾಗುವುದು ಎಂದು ಸಚಿವ ರಾಮಲಿಂಗಾ ರೆಡ್ಡಿ ಹೇಳಿದರು. ''ಕಸ್ತೂರಿರಂಗನ್ ವರದಿಗೆ ರಾಜ್ಯ ಸರಕಾರ ಈಗಾಗಲೇ ವಿರೋಧ ವ್ಯಕ್ತಪಡಿಸಿದೆ. ಈ ಕುರಿತು ಮುಖ್ಯಮಂತ್ರಿ ವಿಶೇಷ ಅಧಿವೇಶನ ಕರೆಯಲಿದ್ದು, ಅಲ್ಲಿ ಚರ್ಚಿಸಿ ವರದಿಗೆ ವಿರೋಧ ವ್ಯಕ್ತಪಡಿಸಲಾಗುವುದು. ಬಳಿಕ ನಿರ್ಣಯ ಕೈಗೊಂಡು ಕೇಂದ್ರ ಸರಕಾರಕ್ಕೆ ಕಳುಹಿಸಲಾಗುವುದು,'' ಎಂದು ತಿಳಿಸಿದರು.

> ಕಸ್ತೂರಿರಂಗನ್ ವರದಿಯನ್ನು ಸಂಪೂರ್ಣವಾಗಿ ತಿರಸ್ಕರಿಸಲು ಸರಕಾರ ನಿರ್ಧರಿಸಿದೆ. ವರದಿಯನ್ನು ಯಥಾವತ್ತಾಗಿ ಒಪ್ಪಲು ಸಾಧ್ಯವಿಲ್ಲ, ಈ ಬಗ್ಗೆ ಸರಕಾರ ಆಕ್ಷೇಪ ವ್ಯಕ್ತಪಡಿಸಿದೆ. ರಾಜ್ಯಗಳ ವಿಶ್ವಾಸ ಪಡೆದು ವರದಿ ಅನುಷ್ಠಾನಗೊಳ್ಳಬೇಕು. ಏಕಾಏಕಿ ಜಾರಿಗೊಳಿಸಲು ಬಿಡುವುದಿಲ್ಲ.
>
> **-ಎ.ಎಸ್.ಪೊನ್ನಣ್ಣ,** ಶಾಸಕ

> ಕಸ್ತೂರಿರಂಗನ್ ವರದಿ ಬಗ್ಗೆ ಜಿಲ್ಲೆಯಲ್ಲಿ ಪಕ್ಷಾತೀತವಾಗಿ ಚರ್ಚಿಸಲು ಸಿದ್ಧ. ಪಕ್ಷವನ್ನು ಹೊರತುಪಡಿಸಿ ರೈತರ ಹಿತಾಸಕ್ತಿ ಕಾಪಾಡುವುದು ಅತ್ಯಂತ ಮುಖ್ಯವಾಗಿದೆ.
>
> **-ಡಾ.ಮಂತರ್ ಗೌಡ,** ಶಾಸಕ

> ಕೊಡಗು ಜಿಲ್ಲೆಯಲ್ಲಿ ಪ್ರತಿನಿತ್ಯ ವನ್ಯಪ್ರಾಣಿಗಳ ಹಾವಳಿ ಹೆಚ್ಚಾಗುತ್ತಿದೆ. ಇದನ್ನು ತಡೆಯಲು ಅಗತ್ಯ ಕ್ರಮ ಕೈಗೊಳ್ಳಬೇಕಿದೆ. ಜಿಲ್ಲೆಯ ಎಲ್ಲಾ ರೈತರು ಹಾಗೂ ಕೃಷಿಕರಿಗೆ ಒಳಿತು ಮಾಡುವುದು ಅತ್ಯಂತ ಮುಖ್ಯವಾಗಿದೆ.
>
> **-ಸುಜಾ ಕುಶಾಲಪ್ಪ,** ವಿಧಾನ ಪರಿಷತ್ ಸದಸ್ಯ

ಮಧ್ಯಪ್ರವೇಶಿಸಿದ ಸಚಿವ ರಾಮಲಿಂಗಾ ರೆಡ್ಡಿ, ''ರಾಜಕೀಯ ಮಾಡುವುದಾದರೆ ಹೊರಗಡೆ ಹೋಗಿ ಮಾಡಿ. ಇಲ್ಲಿ ಸಲಹೆ ಮಾತ್ರ ನೀಡಿ'' ಎಂದು ಸೂಚಿಸಿದರು. ಈ ಸಂದರ್ಭದಲ್ಲಿ ಕೆಲಕಾಲ ಗೊಂದಲದ ವಾತಾವರಣ ನಿರ್ಮಾಣವಾಗಿ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ರವಿ ಕುಶಾಲಪ್ಪ ನಡುವೆ ಮಾತಿನ ಚಕಮಕಿ ನಡೆಯಿತು.

ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಜಿಲ್ಲಾ ಅಧ್ಯಕ್ಷ ಧರ್ಮಜ ಉತ್ತಪ್ಪ, ವಿಧಾನ ಪರಿಷತ್ ಮಾಜಿ ಸದಸ್ಯೆ ವೀಣಾ ಅಚ್ಚಯ್ಯ, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮೀನಾಕ್ಷಿ ನೇಗಿ, ಪಿಸಿಸಿಎಫ್ (ವನ್ಯಜೀವಿ) ಪುಷ್ಕರ್, ಕೊಡಗು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಸೋನಲ್, ಜಿಲ್ಲಾಧಿಕಾರಿ ಎಸ್.ಜೆ.ಸೋಮಶೇಖರ್, ಜಿಪಂ ಸಿಇಒ ಆನಂದ್ ಪ್ರಕಾಶ್ ಮೀನಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಎನ್.ಬಿಂದುಮಣಿ, ಉಪ ಅರಣ್ಯ ಸಂರಕ್ಷಣಾಧಿಕಾರಿ ಅಭಿಷೇಕ್ ಸೇರಿದಂತೆ ಅಧಿಕಾರಿಗಳು ಹಾಜರಿದ್ದರು.

ದಸರಾ ಗಜಪಡೆ ವೀಕ್ಷಿಸಲು ಟಿಕೆಟ್?

ಅರಣ್ಯ ಇಲಾಖೆಯಿಂದ ಶುಲ್ಕ ನಿಗದಿಪಡಿಸಲು ಚಿಂತನೆ | ಕೆಲವರಿಂದ ವಿರೋಧ

■ **ವಿಕ ಸುದ್ದಿಲೋಕ** ಮೈಸೂರು

ಜಂಬೂಸವಾರಿಯಲ್ಲಿ ಪಾಲ್ಗೊಳ್ಳಲು ಮೈಸೂರಿಗೆ ಆಗಮಿಸಿರುವ ಗಜಪಡೆಯನ್ನು ಸಾರ್ವಜನಿಕರು ವೀಕ್ಷಿಸಲು ಇದೇ ಮೊದಲ ಬಾರಿಗೆ ಟಿಕೆಟ್ ವ್ಯವಸ್ಥೆ ಜಾರಿಗೆ ತರಲು ಅರಣ್ಯ ಇಲಾಖೆ ಚಿಂತನೆ ನಡೆಸಿದೆ.

9 ಆನೆಗಳನ್ನು ಶುಕ್ರವಾರ ಅರಮನೆಗೆ ಸಾಂಪ್ರದಾಯಿಕವಾಗಿ ಬರಮಾಡಿಕೊಳ್ಳಲಾಯಿತು. ಇದರ ಬೆನ್ನಲ್ಲೇ ಆನೆಗಳನ್ನು ವೀಕ್ಷಿಸಲು ಸಾರ್ವಜನಿಕರಿಂದ ಶುಲ್ಕ ಪಡೆಯಲು ಅರಣ್ಯ ಇಲಾಖೆ ಮುಂದಾಗಿರುವುದಕ್ಕೆ ಕೆಲವರಿಂದ ವಿರೋಧ ವ್ಯಕ್ತವಾಗಿದೆ.

ದಸರಾ ವೇಳೆ ಅರಮನೆಗೆ ಆಗಮಿಸುವ ಆನೆಗಳನ್ನು ನೋಡಲು ಸಾರ್ವಜನಿಕರು ಮುಗಿಬೀಳುತ್ತಾರೆ. ಅಲ್ಲದೆ, ಆನೆಗಳ ಸಮೀಪ ಹೋಗುವುದು, ಸೆಲ್ಫಿ ತೆಗೆದುಕೊಳ್ಳಲು ಮುಂದಾಗುತ್ತಾರೆ. ಇದಕ್ಕಾಗಿ ಅನ್ಯಮಾರ್ಗವನ್ನು ಅನುಸರಿಸುತ್ತಾರೆ. ಇದನ್ನು ಮನಗಂಡು ಆನೆಗಳ ಸುರಕ್ಷತೆ ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ಅರಣ್ಯ ಇಲಾಖೆ ಶುಲ್ಕ ನಿಗದಿಪಡಿಸುವ ಚಿಂತನೆ ನಡೆಸಿದೆ.

ಸಮಯ ನಿಗದಿ: ''ಆನೆಗಳಿಗೆ ನಿತ್ಯ ತಾಲೀಮು, ವಿಶ್ರಾಂತಿ ಹಾಗೂ ಭೋಜನಕ್ಕೂ ಸಮಯ ಮೀಸಲಿಡಬೇಕಿದೆ. ಹಾಗಾಗಿ ಪ್ರತಿದಿನ ಇಂತಿಷ್ಟು ಗಂಟೆಯಲ್ಲಿ ಮಾತ್ರ ಸಾರ್ವಜನಿಕರಿಗೆ ಪ್ರವೇಶ ಕಲ್ಪಿಸಬೇಕಾಗುತ್ತದೆ. ಹಾಗಾಗಿ ಬೆಳಗ್ಗೆ 10ರಿಂದ 12.30 ಹಾಗೂ ಮಧ್ಯಾಹ್ನ 1.30ರಿಂದ 3.30ವರೆಗೆ ಸಮಯ ನಿಗದಿಪಡಿಸಲು ತೀರ್ಮಾನಿಸಲಾಗಿದೆ. ಶಿಸ್ತುಬದ್ಧವಾಗಿ ಈ ಟಿಕೆಟ್ ವ್ಯವಸ್ಥೆ ಜಾರಿಗೊಳಿಸಲು ಉದ್ದೇಶಿಸಲಾಗಿದೆ. ಜತೆಗೆ ಆನೆಗಳ ಸುರಕ್ಷತೆಗೆ ಹೆಚ್ಚಿನ ಕಾಳಜಿ ವಹಿಸಲಾಗಿದೆ,'' ಎಂದು ಡಿಸಿಎಫ್ ಡಾ.ಐ.ಬಿ.ಪ್ರಭುಗೌಡ 'ವಿಜಯ ಕರ್ನಾಟಕ'ಕ್ಕೆ ತಿಳಿಸಿದ್ದಾರೆ.

ಷರತ್ತುಗಳು, ಶುಲ್ಕ

- 12 ವರ್ಷ ಮೇಲ್ಪಟ್ಟವರಿಗೆ ತಲಾ 100 ರೂ. ಪ್ರವೇಶ ಶುಲ್ಕ ಹಾಗೂ 6ರಿಂದ 12 ವರ್ಷದ ಮಕ್ಕಳಿಗೆ ತಲಾ 50 ರೂ. ನಿಗದಿ
- 20 ನಿಮಿಷಗಳವರೆಗೆ ಮಾತ್ರ ಟಿಕೆಟ್ ಮಾನ್ಯ
- ಆನೆಗಳ ದರ್ಶನದ ವೇಳೆ ಗಜಪಡೆಯೊಂದಿಗೆ ಚೇಷ್ಟೆ ಅಥವಾ ಅಸಭ್ಯ ವರ್ತನೆ ಮಾಡುವಂತಿಲ್ಲ
- ಆನೆಗಳಿಂದ ಕನಿಷ್ಠ 2 ಮೀಟರ್ ಅಂತರ ಕಾಯ್ದುಕೊಳ್ಳುವುದು ಕಡ್ಡಾಯ
- ರೀಲ್ಸ್ ಮಾಡುವುದನ್ನು ಸಂಪೂರ್ಣ ನಿಷೇಧಕ್ಕೆ ಚಿಂತನೆ

> ಗಜಪಡೆ ವೀಕ್ಷಣೆಗೆ ಶುಲ್ಕ ನಿಗದಿಪಡಿಸುವ ಚಿಂತನೆ ಇದೆ. ಪ್ರಾಯೋಗಿಕವಾಗಿ ಎರಡು ಟಿಕೆಟ್‌ಗಳನ್ನು ನೀಡಲಾಗಿದೆ. ಆದರೆ, ಇನ್ನೂ ಅಂತಿಮ ತೀರ್ಮಾನ ಕೈಗೊಂಡಿಲ್ಲ, ಈ ಕುರಿತು ಮೇಲಧಿಕಾರಿಗಳ ಗಮನಕ್ಕೆ ತಂದು, ಅವರು ಒಪ್ಪಿಗೆ ನೀಡಿದರೆ ಮಾತ್ರ ಪ್ರವೇಶ ಶುಲ್ಕ ಜಾರಿಗೊಳಿಸಲಾಗುವುದು.
>
> **- ಡಾ.ಐ.ಬಿ.ಪ್ರಭುಗೌಡ,** ಡಿಸಿಎಫ್

ಮಾವುತ ಮಕ್ಕಳ ಶಿಕ್ಷಣಕ್ಕೆ ವಿನಿಯೋಗ: ಟಿಕೆಟ್‌ನಿಂದ ಬಂದ ಹಣವನ್ನು ಮಾವುತರ ಕುಟುಂಬಕ್ಕೆ ಮೀಸಲಿಡಲು ಅರಣ್ಯ ಇಲಾಖೆ ನಿರ್ಧರಿಸಿದೆ. ಇದಕ್ಕಾಗಿ ಮಾವುತರ 'ವೆಲ್‌ಫೇರ್ ಫಂಡ್' ಸ್ಥಾಪಿಸಿ, ಮಾವುತರ ಮಕ್ಕಳ ವಿದ್ಯಾಭ್ಯಾಸಕ್ಕೆ ನೆರವು ನೀಡುವ ಸದುದ್ದೇಶವನ್ನು ಹೊಂದಲಾಗಿದೆ. ಮಾವುತ, ಕಾವಾಡಿಗರ ಸಮುದಾಯ ಉನ್ನತೀಕರಣಕ್ಕೂ ಬಳಸಲು ಉದ್ದೇಶಿಲಾಗಿದೆ. ಆನೆಗಳಿಗೆ ಆಹಾರಕ್ಕೂ ಈ ಹಣವನ್ನು ಉಪಯೋಗಿಸಿಕೊಳ್ಳಲು ಇಲಾಖೆ ತೀರ್ಮಾನಿಸಿದೆ.

ನಮ್ಮ ಸೇವೆಗಳಿಗೆ ಕುರಿತಂತೆ ಗ್ರಾಹಕರಲ್ಲಿರುವ ಯಾವುದೇ ಪ್ರಶ್ನೆ/ಸಂದೇಹಗಳನ್ನು ಅಥವಾ ದೂರುಗಳನ್ನು ನಾವು ಯಾವಾಗಲೂ ಸ್ವೀಕರಿಸಲು ತಯಾರಾಗಿದ್ದೇವೆ. ಆದ್ದರಿಂದ, ನಮ್ಮ ಗ್ರಾಹಕರು ಸಾಧಾರಣ ವಿಚಾರಣೆಗಳು ಮತ್ತು ಸಂದೇಹಗಳಿಗಾಗಿ 121-ಕ್ಕೆ ಅಥವಾ ಯಾವುದೇ ಸೇವೆ ಕೋರಿಕೆ ಅಥವಾ ದೂರುಗಳನ್ನು ಸಲ್ಲಿಸುವುದಕ್ಕಾಗಿ 198-ಕ್ಕೆ ಕರೆ ಮಾಡಬಹುದಾಗಿದೆ. ಇದಲ್ಲದೆ, ಗ್ರಾಹಕರು ನಮ್ಮನ್ನು ಇಲ್ಲಿಯೂ www.airtel.in/airtelpresence ಸಂಪರ್ಕಿಸಬಹುದಾಗಿದೆ. ಒಂದು ವೇಳೆ ಹೆಚ್ಚಿನ ಸಹಾಯ ಬೇಕಾಗಿದ್ದಲ್ಲಿ, ನಮ್ಮ ಗ್ರಾಹಕರು ಅಪೆಲ್ಲೇಟ್ ಅಥಾರಿಟಿ ಅವರನ್ನು ಸಂಪರ್ಕಿಸಬಹುದಾಗಿದೆ.

		ಮೊಬೈಲ್ ಗ್ರಾಹಕರಿಗಾಗಿ	ಸ್ಥಿರ ದೂರವಾಣಿ ಮತ್ತು ಬ್ರಾಡ್‌ಬ್ಯಾಂಡ್ ಗ್ರಾಹಕರಿಗಾಗಿ
ಕಸ್ಟಮರ್ ಕೇರ್ (24X7)	ಸಾಮಾನ್ಯ ಸಂದೇಹ ನಿವಾರಣೆ ನಂಬರ್	121 ಅಥವಾ 9845012345 (ಪೋಸ್ಟ್‌ಪೇಡ್) 121 ಅಥವಾ 9845098450 (ಪ್ರೀಪೇಡ್)	121 ಅಥವಾ 080-44444121
	ಕಸ್ಟಮರ್ ಕೇರ್ ನಂಬರ್	198 ಅಥವಾ 9845012345 (ಪೋಸ್ಟ್‌ಪೇಡ್) 198 ಅಥವಾ 9845098450 (ಪ್ರೀಪೇಡ್)	121 ಅಥವಾ 080-44444198
	ಇ-ಮೇಲ್	121@in.airtel.com	
	ವೆಬ್‌ಸೈಟ್	www.airtel.in/airtelpresence	
ಅಪೆಲ್ಲೇಟ್ ಅಥಾರಿಟಿ (ಬೆಳಿಗ್ಗೆ 9:30 ರಿಂದ ಸಂಜೆ 6:30 ಸೋಮವಾರದಿಂದ ಶುಕ್ರವಾರದ ವರೆಗೆ)	ಹೆಸರು	ಸೌಮಿಲ್ ಅಗ್ರವಾಲ್	
	ಸಂಪರ್ಕ ನಂಬರ್	9972544865	080-41115201
	ಫ್ಯಾಕ್ಸ್ ನಂಬರ್	080-41218070	
	ಇ-ಮೇಲ್	appellate.kk@airtel.com	appellate.southabts@airtel.com
	ವಿಳಾಸ	ಭಾರತಿ ಏರ್‌ಟೆಲ್ ಲಿ., 55 ದಿವ್ಯಶ್ರೀ ಟವರ್ಸ್, ಬನ್ನೇರ್‌ಘಟ್ಟ, ಬೆಂಗಳೂರು-560029.	

ಯಾವುದೇ ದೂರನ್ನು ಸಲ್ಲಿಸುವುದಕ್ಕಾಗಿ ಅಥವಾ ಸಲ್ಲಿಸಿರುವ ದೂರಿನ ಸ್ಥಿತಿಯನ್ನು ತಿಳಿದುಕೊಳ್ಳುವುದಕ್ಕಾಗಿ www.airtel.in/airtelpresence ಅನ್ನು ಸಂಪರ್ಕಿಸಿ ಅಥವಾ www.airtel.in-ನಲ್ಲಿರುವ ಹೋಂ ಪೇಜ್‌ನಲ್ಲಿ ''Need Help'' ಎಂಬ ಟ್ಯಾಬ್ ಅನ್ನು ಕ್ಲಿಕ್ ಮಾಡಿ.

ಅ. ಯಾವುದೇ ದೂರನ್ನು ಸಲ್ಲಿಸುವುದಕ್ಕಾಗಿ ಸರ್ವಿಸ್ ಟೈಪ್ ಮತ್ತು ಎನ್‌ಕ್ವೇರಿ ಟೈಪ್ ಮತ್ತು ಬಳಿಕ ಬೇಕಾಗಿರುವ ವಿವರಗಳನ್ನು ಭರ್ತಿ ಮಾಡಿ.

ಆ. ನಿಮ್ಮ ದೂರಿನ ಸ್ಥಿತಿಯನ್ನು ತನಿಖೆ ಮಾಡುವುದಕ್ಕಾಗಿ ಲಭ್ಯವಿರುವ ಲಿಂಕ್ ಅನ್ನು ಕ್ಲಿಕ್ ಮಾಡಿ.

ನಿಮಗೆ ಪರಿಹಾರ ಒದಗಿಸುವುದಕ್ಕಾಗಿ ಅಪೆಲ್ಲೇಟ್ ಅಥಾರಿಟಿ ಅವರಿಗೆ 39 ದಿನಗಳ ಕಾಲಾವಕಾಶವನ್ನು ನೀಡಿರಿ. 121 IVR ಮತ್ತು 198 ಶುಲ್ಕ ರಹಿತ ನಂಬರ್‌ಗಳಾಗಿವೆ. ಏಜೆಂಟ್ ಸಹಾಯಕ್ಕಾಗಿ ನೀವು 121-ಕ್ಕೆ ಮೊಬೈಲ್ (ಪ್ರೀಪೇಯಿಡ್)ನಿಂದ ಮಾಡುವ ಕರೆಗಳಿಗೆ 50 ಪೈಸೆ/3 ನಿಮಿಷಗಳು ಪ್ರತಿ ಕರೆಗೆ ಅನ್ವಯಿಸುತ್ತದೆ.

SMS ಅಥವಾ ವಾಯ್ಸ್ ಮೂಲಕ ಯಾವುದೇ ಏರ್‌ಟೆಲ್ ಮೊಬೈಲ್ ನಂಬರಿನಲ್ಲಿ ಆಕ್ಟಿವೇಟ್ ಮಾಡಿರುವ ವಾಲ್ಯೂ ಆಡೆಡ್ ಸೇವೆಗಳನ್ನು ಡೀ-ಆಕ್ಟಿವೇಟ್ ಮಾಡುವುದಕ್ಕಾಗಿ ಟೋಲ್ ಫ್ರೀ ಶಾರ್ಟ್ ಕೋಡ್ 155223 ಡಯಲ್ ಮಾಡಿ. ಅಪೆಲ್ಲೇಟ್ ನಂಬರ್‌ಗಳು ಶುಲ್ಕ ರಹಿತವಲ್ಲ.

*ಕೇವಲ ಕರ್ನಾಟಕಕ್ಕೆ ಮಾತ್ರವೇ ಅನ್ವಯವಾಗುತ್ತದೆ.

EXCELSOFT®

ಎಕ್ಸೆಲ್‌ಸಾಫ್ಟ್ ಟೆಕ್ನಾಲಜೀಸ್ ಲಿಮಿಟೆಡ್.

(ಈ ಹಿಂದೆ ಎಕ್ಸೆಲ್‌ಸಾಫ್ಟ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು)

CIN: L72900KA2000PLC027256

ನೋಂದಾಯಿತ ಕಚೇರಿ: 1- ಬಿ, ಹೂಟಗಳ್ಳಿ ಕೈಗಾರಿಕಾ ಪ್ರದೇಶ, ಮೈಸೂರು, ಕರ್ನಾಟಕ, ಭಾರತ – 570018. **ದೂರವಾಣಿ:** 0821-4002200

ಜಾಲತಾಣ: https://www.excelsoftcorp.com | **ಇ-ಮೇಲ್:** compliance.officer@excelsoftcorp.com

26ನೇ ವಾರ್ಷಿಕ ಸಾಮಾನ್ಯ ಸಭೆಯ ("ಎಜಿಎಂ") ಸೂಚನೆ ಗುರುವಾರ, ಸೆಪ್ಟೆಂಬರ್ 24, 2026 ಭಾರತೀಯ ಪ್ರಮಾಣಿತ ಸಮಯ ("ಐಎಸ್‌ಟಿ") ರಂದು 15:30 ಗಂಟೆಗೆ ವೀಡಿಯೊ ಕಾನ್ಫರೆನ್ಸ್ / ಇತರೆ ಆಡಿಯೋ-ವಿಶುವಲ್ ("ವಿಸಿ/ಒಎವಿಎಂ") ಮಾಧ್ಯಮಗಳ ಮೂಲಕ ನಡೆಯುವ ವಾರ್ಷಿಕ ಸಾಮಾನ್ಯ ಸಭೆ ಕುರಿತು ಸೂಚನೆ

26ನೇ ವಾರ್ಷಿಕ ಸಾಮಾನ್ಯ ಸಭೆಯ ಸೂಚನೆ

ಇದರಿಂದ ತಿಳಿಸಲಾಗುವುದೇನೆಂದರೆ, ಎಕ್ಸೆಲ್‌ಸಾಫ್ಟ್ ಟೆಕ್ನಾಲಜೀಸ್ ಲಿಮಿಟೆಡ್ **("ಕಂಪನಿ")**ಯ ಷೇರುದಾರರ 26ನೇ ವಾರ್ಷಿಕ ಸಾಮಾನ್ಯ ಸಭೆ **("ಎಜಿಎಂ")**ಯನ್ನು ಗುರುವಾರ, ಸೆಪ್ಟೆಂಬರ್ 24, 2026 ರಂದು ಭಾರತೀಯ ಪ್ರಮಾಣಿತ ಸಮಯ **(ಐಎಸ್‌ಟಿ)** 15:30 ವೀಡಿಯೊ ಕಾನ್ಫರೆನ್ಸ್ / ಇತರೆ ಆಡಿಯೋ-ವಿಶುವಲ್ ವಿಧಾನಗಳ ("ವಿಸಿ/ಒಎವಿಎಂ") ಮೂಲಕ ನಡೆಸಲಾಗುತ್ತದೆ. 2020ರ ಮೇ 5ರಂದು ಹೊರಡಿಸಲಾದ ಸಾಮಾನ್ಯ ಸುತ್ತೋಲೆ ಸಂಖ್ಯೆ 20/2020 ಹಾಗೂ ನಂತರ ಹೊರಡಿಸಲಾದ ಸಂಬಂಧಿತ ಸುತ್ತೋಲೆಗಳು, ಅವುಗಳಲ್ಲಿ ಇತ್ತೀಚಿನದಾದ 2025ರ ಸೆಪ್ಟೆಂಬರ್ 22ರಂದು ಹೊರಡಿಸಲಾದ ಸಾಮಾನ್ಯ ಸುತ್ತೋಲೆ ಸಂಖ್ಯೆ 03/2025, ಇವುಗಳನ್ನು ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ **("ಎಂಸಿಎ")** ಹೊರಡಿಸಿದ್ದು, ಹಾಗೆಯೇ ಅಕ್ಟೋಬರ್ 3, 2024ರ SEBI/HO/CFD/CFD-PoD-2/P/CIR/2024/133 ಸುತ್ತೋಲೆಯನ್ನು ಭಾರತೀಯ ಷೇರುಪೇಟೆ ಮತ್ತು ವಿನಿಮಯ ಮಂಡಳಿ **("ಸೆಬಿ")** ಹೊರಡಿಸಿರುವುದಕ್ಕೆ ಅನುಗುಣವಾಗಿ, ಕಂಪನಿಯು 2025–26 ಹಣಕಾಸು ವರ್ಷದ ವಾರ್ಷಿಕ ವರದಿ ಮತ್ತು **ಎಜಿಎಂ** ಸೂಚನೆಯನ್ನು ಗುರುವಾರ, ಆಗಸ್ಟ್ 27, 2026 ರಂದು ಕಂಪನಿ / ಡಿಪಾಸಿಟರಿ(ಗಳು) / ಕಂಪನಿಯ ರಿಜಿಸ್ಟ್ರಾರ್ ಮತ್ತು ಶೇರ್ ಟ್ರಾನ್ಸ್‌ಫರ್ ಏಜೆಂಟ್ ("ಆರ್‌ಟಿಎ") ಬಳಿ ಇ-ಮೇಲ್ ವಿಳಾಸ ನೋಂದಾಯಿಸಿರುವ ಎಲ್ಲಾ ಷೇರುದಾರರಿಗೆ ವಿದ್ಯುನ್ಮಾನ ಮಾಧ್ಯಮದ ಮೂಲಕ ಕಳುಹಿಸಿದೆ.

ಮೇಲೆ ತಿಳಿಸಿರುವ ದಾಖಲೆಗಳು ಕಂಪನಿಯ ವೆಬ್‌ಸೈಟ್, ಆದ https://www.excelsoftcorp.com/investors/, ಬಿಎಸ್‌ಇ ಲಿಮಿಟೆಡ್‌ನ ವೆಬ್‌ಸೈಟ್ (BSE): www.bseindia.com ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್ (NSE) ನ ವೆಬ್‌ಸೈಟ್: www.nseindia.com ಹಾಗೂ ದೂರಸ್ಥ ಇ-ಮತದಾನ (ರಿಮೋಟ್ ಇ-ಮತದಾನ) ಸೌಲಭ್ಯವನ್ನು ಒದಗಿಸುವ ಸಂಸ್ಥೆಯಾದ ಎಂಯುಎಫ್‌ಜಿ ಇಂಟೈಮ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ **("ಎಂಯುಎಫ್‌ಜಿ ")**ನ ವೆಬ್‌ಸೈಟ್: https://instavote.linkintime.co.in/ ನಲ್ಲಿಯೂ ಲಭ್ಯವಿದೆ.

ತಮ್ಮ ಇ-ಮೇಲ್ ವಿಳಾಸವನ್ನು ಕಂಪನಿ / ಡಿಪಾಸಿಟರಿ / ಆರ್‌ಟಿಎ ಬಳಿ ನೋಂದಾಯಿಸದಿರುವ ಷೇರುದಾರರಿಗೆ/ ಸದಸ್ಯರಿಗೆ ವಾರ್ಷಿಕ ವರದಿ ಲಭ್ಯವಿರುವ ವೆಬ್ ಲಿಂಕ್ ಹಾಗೂ ಅದರ ನಿಖರ ಮಾರ್ಗವನ್ನು ಒಳಗೊಂಡ ಪತ್ರವನ್ನು ಕಳುಹಿಸಲಾಗಿದೆ. ಯಾವುದೇ ಸದಸ್ಯರು 2025–26 ಹಣಕಾಸು ವರ್ಷದ ವಾರ್ಷಿಕ ವರದಿ ಮುದ್ರಿತ ಪ್ರತಿಯನ್ನು ಪಡೆಯಲು ಬಯಸಿದರೆ, Compliance.officer@excelsoftcorp.comಗೆ ಇ-ಮೇಲ್ ಕಳುಹಿಸುವ ಮೂಲಕ ವಿನಂತಿಸಬಹುದು.

ಶುಕ್ರವಾರ, ಸೆಪ್ಟೆಂಬರ್ 18, 2026ರ ಕಟ್-ಆಫ್ ದಿನಾಂಕದಂದು ಷೇರುಗಳನ್ನು ಭೌತಿಕ ರೂಪದಲ್ಲಿ ಅಥವಾ ಡಿಮ್ಯಾಟ್ ರೂಪದಲ್ಲಿ ಹೊಂದಿರುವ ಷೇರುದಾರರು, ಎಜಿಎಂ ಸೂಚನೆಯಲ್ಲಿ ನಮೂದಿಸಿರುವ ನಿರ್ಣಯಗಳ ಕುರಿತು ಎಂಯುಎಫ್‌ಜಿ ಒದಗಿಸಿರುವ ದೂರಸ್ಥ ವಿದ್ಯುನ್ಮಾನ ಮತದಾನ ಸೌಲಭ್ಯ ಮೂಲಕ ದೂರಸ್ಥ ವಿದ್ಯುನ್ಮಾನ ಮತದಾನ (ರಿಮೋಟ್ ಇ-ವೋಟಿಂಗ್) ಮಾಡಬಹುದು.

ಷೇರುದಾರರ ಮತದಾನದ ಹಕ್ಕುಗಳು ಕಂಪನಿಯ ಪಾವತಿಸಲಾದ ಈಕ್ವಿಟಿ ಷೇರು ಬಂಡವಾಳದಲ್ಲಿ ಅವರು ಹೊಂದಿರುವ ಈಕ್ವಿಟಿ ಷೇರುಗಳ ಪ್ರಮಾಣಕ್ಕೆ ಅನುಗುಣವಾಗಿರುತ್ತವೆ. ವಿಸಿ/ಒಎವಿಎಂ ಸೌಲಭ್ಯದ ಮೂಲಕ ಎಜಿಎಂನಲ್ಲಿ ಭಾಗವಹಿಸುವ ಷೇರುದಾರರನ್ನು ಕಂಪನಿಗಳ ಕಾಯ್ದೆ, 2013ರ **("ಕಾಯ್ದೆ")** ಸೆಕ್ಷನ್ 103ರ ಅಡಿಯಲ್ಲಿ ಕ್ವೋರಂ ನಿರ್ಧರಿಸುವ ಉದ್ದೇಶಕ್ಕಾಗಿ ಪರಿಗಣಿಸಲಾಗುತ್ತದೆ.

ಎಲ್ಲಾ ಷೇರುದಾರರಿಗೆ/ಸದಸ್ಯರಿಗೆ ತಿಳಿಸಲಾಗುವ ವಿಷಯಗಳು:

i. ಎಜಿಎಂ ಸೂಚನೆಯಲ್ಲಿ ನೀಡಿರುವ ವ್ಯವಹಾರಗಳನ್ನು ಎಲೆಕ್ಟ್ರಾನಿಕ್ ವಿಧಾನದಲ್ಲಿ, ಅಂದರೆ ದೂರಸ್ಥ ವಿದ್ಯುನ್ಮಾನ ಮತದಾನ ಅಥವಾ ಎಜಿಎಂ ಸಮಯದಲ್ಲಿನ ದೂರಸ್ಥ ವಿದ್ಯುನ್ಮಾನ ಮತದಾನದ ಮೂಲಕ ವ್ಯವಹರಿಸಲಾಗುತ್ತದೆ.

ii. ದೂರಸ್ಥ ವಿದ್ಯುನ್ಮಾನ ಮತದಾನವು ಸೋಮವಾರ, ಸೆಪ್ಟೆಂಬರ್ 21, 2026 ರಂದು ಬೆಳಿಗ್ಗೆ 9:00 ಗಂಟೆಗೆ (ಐಎಸ್‌ಟಿ) ಪ್ರಾರಂಭವಾಗುತ್ತದೆ.

iii. ದೂರಸ್ಥ ವಿದ್ಯುನ್ಮಾನ ಮತದಾನವು ಬುಧವಾರ, ಸೆಪ್ಟೆಂಬರ್ 23, 2026 ರಂದು ಸಂಜೆ 17:00 ಗಂಟೆಗೆ (ಐಎಸ್‌ಟಿ) ಕೊನೆಗೊಳ್ಳುತ್ತದೆ.

iv. ಎಜಿಎಂ ಸೂಚನೆಯಲ್ಲಿ ನಮೂದಿಸಿರುವ ನಿರ್ಣಯಗಳ ಕುರಿತು ದೂರಸ್ಥ ವಿದ್ಯುನ್ಮಾನ ಮತದಾನದ ಮೂಲಕ ಅಥವಾ ಎಜಿಎಂ ನಲ್ಲಿ ವಿದ್ಯುನ್ಮಾನ ಮತದಾನದ ಮೂಲಕ ಮತ ಚಲಾಯಿಸಲು ಸದಸ್ಯರ ಅರ್ಹತೆಯನ್ನು ನಿರ್ಧರಿಸುವ ಕಟ್-ಆಫ್ ದಿನಾಂಕವು ಶುಕ್ರವಾರ, ಸೆಪ್ಟೆಂಬರ್ 18, 2026 ಆಗಿರುತ್ತದೆ.

v. ಎಜಿಎಂ ಸೂಚನೆ ಕಳುಹಿಸಿದ ನಂತರ ಕಂಪನಿಯ ಷೇರುಗಳನ್ನು ಪಡೆದುಕೊಂಡು, ಸೆಪ್ಟೆಂಬರ್ 18, 2026ರ ಕಟ್-ಆಫ್ ದಿನಾಂಕದಂದು ಸದಸ್ಯರಾಗಿರುವವರು, ತಮ್ಮ ಲಾಗಿನ್ ಐಡಿ ಮತ್ತು ಪಾಸ್‌ವರ್ಡ್ ಪಡೆಯಲು enotices@in.mpms.mufg.com ಗೆ ವಿನಂತಿಯನ್ನು ಕಳುಹಿಸಬಹುದು. ಆದಾಗ್ಯೂ, ಅವರು ಈಗಾಗಲೇ ಎಂಯುಎಫ್‌ಜಿಲ್ಲಿ ದೂರಸ್ಥ ವಿದ್ಯುನ್ಮಾನ ಮತದಾನಕ್ಕಾಗಿ ನೋಂದಾಯಿಸಿಕೊಂಡಿದ್ದರೆ, ತಮ್ಮ ಅಸ್ತಿತ್ವದಲ್ಲಿರುವ ಬಳಕೆದಾರ ಐಡಿ ಮತ್ತು ಪಾಸ್‌ವರ್ಡ್ ಬಳಸಿ ಮತ ಚಲಾಯಿಸಬಹುದು.

ಷೇರುದಾರರು/ಸದಸ್ಯರು ಈ ಕೆಳಗಿನ ವಿಷಯಗಳನ್ನು ಗಮನಿಸಬೇಕು:

i. ದೂರಸ್ಥ ಇ-ವೋಟಿಂಗ್ ವ್ಯವಸ್ಥೆಯನ್ನು ಬುಧವಾರ, ಸೆಪ್ಟೆಂಬರ್ 23, 2026ರ ಸಂಜೆ 17:00 **ಗಂಟೆಗೆ (ಐಎಸ್‌ಟಿ)** ನಂತರ ನಿಷ್ಕ್ರಿಯಗೊಳಿಸಲಾಗುತ್ತದೆ.

ii. ಯಾವುದೇ ನಿರ್ಣಯದ ಕುರಿತು ಒಮ್ಮೆ ಮತ ಚಲಾಯಿಸಿದ ನಂತರ, ಆ ಮತವನ್ನು ನಂತರ ಬದಲಾಯಿಸಲು ಷೇರುದಾರರಿಗೆ ಅವಕಾಶ ಇರುವುದಿಲ್ಲ.

iii. ಎಜಿಎಂ ಸಮಯದಲ್ಲಿಯೂ ವಿದ್ಯುನ್ಮಾನ ಮತದಾನದ ಸೌಲಭ್ಯ ಲಭ್ಯವಿರುತ್ತದೆ. ದೂರಸ್ಥ ವಿದ್ಯುನ್ಮಾನ ಮತದಾನದ ಮೂಲಕ ಮುಂಚಿತವಾಗಿ ಮತ ಚಲಾಯಿಸದ ಹಾಗೂ ಮತ ಚಲಾಯಿಸುವುದರಿಂದ ಇತರ ರೀತಿಯಲ್ಲಿ ನಿರ್ಬಂಧಿತರಾಗಿರದ ಷೇರುದಾರರು ಮತ್ತು ಎಜಿಎಂನಲ್ಲಿ ಭಾಗವಹಿಸುವ ಷೇರುದಾರರು, ಎಜಿಎಂ ಸಮಯದಲ್ಲಿ ವಿದ್ಯುನ್ಮಾನ ಮತದಾನ ವ್ಯವಸ್ಥೆಯ ಮೂಲಕ ಮತ ಚಲಾಯಿಸಬಹುದು.

iv. ದೂರಸ್ಥ ವಿದ್ಯುನ್ಮಾನ ಮತದಾನದ ಮೂಲಕ ತಮ್ಮ ಮತವನ್ನು ಚಲಾಯಿಸಿರುವ ಸದಸ್ಯರು ಎಜಿಎಂನಲ್ಲಿ ಭಾಗವಹಿಸಬಹುದು; ಆದರೆ ಅವರು ಮತ್ತೆ ತಮ್ಮ ಮತವನ್ನು ಚಲಾಯಿಸಲು ಅರ್ಹರಾಗಿರುವುದಿಲ್ಲ.

v. ಕಟ್-ಆಫ್ ದಿನಾಂಕದಂದು ಷೇರುದಾರರ ನೋಂದಣಿಪುಸ್ತಕದಲ್ಲಿ ಅಥವಾ ಡಿಪಾಸಿಟರಿಗಳು ನಿರ್ವಹಿಸುವ ಫಲಾನುಭವಿ ಮಾಲೀಕರ ನೋಂದಣಿಯಲ್ಲಿ ಹೆಸರು ಹೊಂದಿರುವ ವ್ಯಕ್ತಿಗಳು ಮಾತ್ರ ದೂರಸ್ಥ ವಿದ್ಯುನ್ಮಾನ ಮತದಾನ ಅಥವಾ ಎಜಿಎಂನಲ್ಲಿ ವಿದ್ಯುನ್ಮಾನ ಮತದಾನದ ಸೌಲಭ್ಯವನ್ನು ಬಳಸಲು ಅರ್ಹರಾಗಿರುತ್ತಾರೆ.

vi. ಡಿಮ್ಯಾಟ್ ರೂಪದಲ್ಲಿ ಅಥವಾ ಭೌತಿಕ ರೂಪದಲ್ಲಿ ಷೇರುಗಳನ್ನು ಹೊಂದಿರುವ ಷೇರುದಾರರು ಹಾಗೂ ತಮ್ಮ ಇ-ಮೇಲ್ ವಿಳಾಸವನ್ನು ನೋಂದಾಯಿಸದಿರುವ ಷೇರುದಾರರು ದೂರಸ್ಥವಾಗಿ ಮತ ಚಲಾಯಿಸುವ ವಿಧಾನವನ್ನು ಎಜಿಎಂ ಸೂಚನೆಯಲ್ಲಿ ನೀಡಲಾಗಿದೆ. ಈ ವಿವರಗಳು ಕಂಪನಿಯ ವೆಬ್‌ಸೈಟ್ ಆದ https://www.excelsoftcorp.com/investors/ ನಲ್ಲಿಯೂ ಲಭ್ಯವಿವೆ.

vii. ಡಿಮ್ಯಾಟ್ ರೂಪದಲ್ಲಿ ಷೇರುಗಳನ್ನು ಹೊಂದಿರುವ ಮತ್ತು ತಮ್ಮ ಇ-ಮೇಲ್ ವಿವರಗಳನ್ನು ನವೀಕರಿಸದಿರುವ ಷೇರುದಾರರು, ತಮ್ಮ ಡಿಪಾಸಿಟರಿ ಪಾರ್ಟಿಸಿಪೆಂಟ್‌ಗಳ ಮೂಲಕ ತಮ್ಮ ಡಿಪಾಸಿಟರಿಗಳಲ್ಲಿ ಇ-ಮೇಲ್ ಐಡಿ ಮತ್ತು ಇತರ ಕೆವೈಸಿ ವಿವರಗಳನ್ನು ನೋಂದಾಯಿಸಿಕೊಳ್ಳುವಂತೆ ವಿನಂತಿಸಲಾಗಿದೆ. ಭೌತಿಕ ರೂಪದಲ್ಲಿ ಷೇರುಗಳನ್ನು ಹೊಂದಿರುವ ಮತ್ತು ತಮ್ಮ ಕೆವೈಸಿ ವಿವರಗಳನ್ನು ನವೀಕರಿಸದಿರುವ ಷೇರುದಾರರು, ಕಂಪನಿಯ ರಿಜಿಸ್ಟ್ರಾರ್ ಮತ್ತು ಶೇರ್ ಟ್ರಾನ್ಸ್‌ಫರ್ ಏಜೆಂಟ್, ಎಂಯುಎಫ್‌ಜಿ ಬಳಿ ತಮ್ಮ ಇ-ಮೇಲ್, ಬ್ಯಾಂಕ್ ಖಾತೆ ಮತ್ತು ಇತರ ಕೆವೈಸಿ ವಿವರಗಳನ್ನು ನವೀಕರಿಸಲು Form ISR-1 ಅನ್ನು ಸಲ್ಲಿಸಬೇಕು. Form ISR-1 ಅನ್ನು https://www.excelsoftcorp.com/investors/ ನಿಂದ ಡೌನ್‌ಲೋಡ್ ಮಾಡಬಹುದು ಮತ್ತು excelsofttechnologies.ipo@linkintime.co.in ಗೆ ಎಜಿಎಂ ಮುನ್ನವೇ ಇ-ಮೇಲ್ ಮೂಲಕ ಕಳುಹಿಸಬಹುದು.

viii ಕಂಪನಿಯು ಮತದಾನ ಪ್ರಕ್ರಿಯೆಯನ್ನು ಕಾನೂನಿನ ಪ್ರಕಾರ ನ್ಯಾಯಸಮ್ಮತ ಮತ್ತು ಪಾರದರ್ಶಕ ರೀತಿಯಲ್ಲಿ ಪರಿಶೀಲಿಸಲು **ಪದ್ಮಾವತಿ ಅಂಡ್ ವಿಜಯೇಶ್ ಅಸೋಸಿಯೇಟ್ಸ್ ಎಲ್‌ಎಲ್‌ಪಿ,** ಕಂಪನಿ ಸೆಕ್ರೆಟರೀಸ್ ಇನ್ ಪ್ರ್ಯಾಕ್ಟೀಸ್ LLPIN: ACI-9072, FRN/ICSI Unique Code: L2024KR016900, Peer Review No.: 8278/2026 ಇವರನ್ನು ಪರಿಶೀಲಕರಾಗಿ ನೇಮಿಸಿದೆ. ಈ ಸಂಸ್ಥೆಯನ್ನು ಶ್ರೀ ವಿಜಯೇಶ್ ಆರ್ [ಸಿಒಪಿ ನಂ. 27386; ಸದಸ್ಯತ್ವ ನಂ.: F12248] ಡೆಸಿಗ್ನೇಟೆಡ್ ಪಾರ್ಟ್ನರ್‌ರವರು ಪ್ರತಿನಿಧಿಸುತ್ತಾರೆ. ಅವರಿಂದ ಕರ್ತವ್ಯ ನಿರ್ವಹಿಸಲು ಸಾಧ್ಯವಾಗದ ಸಂದರ್ಭದಲ್ಲಿ, ಶ್ರೀಮತಿ ಪದ್ಮಾವತಿ ಕವೂರ್ (ಡೆಸಿಗ್ನೇಟೆಡ್ ಪಾರ್ಟ್ನರ್) [ಸಿಒಪಿ ನಂ.3963; ಸದಸ್ಯತ್ವ ನಂ.: F6457] ಅವರು ಕರ್ತವ್ಯ ನಿರ್ವಹಿಸಲಿದ್ದಾರೆ. ಇವರು ದೂರಸ್ಥ ಇ-ವೋಟಿಂಗ್ ಮತ್ತು ಎಜಿಎಂ ಸಮಯದಲ್ಲಿ ನಡೆಯುವ ಇ-ವೋಟಿಂಗ್ ಪ್ರಕ್ರಿಯೆಯನ್ನು ಕಾನೂನಿನ ಅನುಸಾರ ಪರಿಶೀಲಿಸಲಿದ್ದಾರೆ.

ix. ಇ-ಮತದಾನಕ್ಕೆ ಸಂಬಂಧಿಸಿದ ಯಾವುದೇ ಪ್ರಶ್ನೆಗಳಿದ್ದಲ್ಲಿ, ಸದಸ್ಯರು ಇನ್‌ಸ್ಟಾವೋಟ್‌ನ 'ಡೌನ್‌ಲೋಡ್‌ಗಳು' ವಿಭಾಗದಲ್ಲಿ ಲಭ್ಯವಿರುವ ಸದಸ್ಯರಿಗಾಗಿ ಪದೇ ಪದೇ ಕೇಳಲಾಗುವ ಪ್ರಶ್ನೆಗಳು (ಎಫ್‌ಎಕ್ಯೂಗಳು) ಮತ್ತು ಇ-ಮತದಾನದ ಬಳಕೆದಾರರ ಕೈಪಿಡಿಯನ್ನು ಉಲ್ಲೇಖಿಸಬಹುದು ಅಥವಾ ಎಂಯುಎಫ್‌ಜಿ ಇಂಟೈಮ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ – ಇನ್‌ಸ್ಟಾವೋಟ್ ಸಹಾಯವಾಣಿಯನ್ನು enotices@in.mpms.mufg.com ಗೆ ವಿನಂತಿಯನ್ನು ಕಳುಹಿಸುವ ಮೂಲಕ ಅಥವಾ 022 – 4918 6000 ದೂರವಾಣಿ ಸಂಖ್ಯೆಗೆ ಕರೆ ಮಾಡುವ ಮೂಲಕ ಸಂಪರ್ಕಿಸಬಹುದು.

x. ಸಭೆಯಲ್ಲಿ ವಿಸಿ/ಒಎವಿಎಂ ಮೂಲಕ ಪ್ರವೇಶಿಸಿ ಭಾಗವಹಿಸಲು ತಾಂತ್ರಿಕ ಸಹಾಯದ ಅಗತ್ಯವಿರುವ ಷೇರುದಾರರು ಎಂಯುಎಫ್‌ಜಿ ಇಂಟೈಮ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ – ಇನ್‌ಸ್ಟಾವೋಟ್ ಸಹಾಯವಾಣಿಯನ್ನು 022 – 4918 6000 ದೂರವಾಣಿ ಸಂಖ್ಯೆಯಲ್ಲಿ ಸಂಪರ್ಕಿಸಬಹುದು ಅಥವಾ enotices@in.mpms.mufg.com ಗೆ ವಿನಂತಿಯನ್ನು ಕಳುಹಿಸಬಹುದು.

ನಿರ್ದೇಶಕರ ಮಂಡಳಿಯ ಆದೇಶದ ಮೇರೆಗೆ
ಎಕ್ಸೆಲ್‌ಸಾಫ್ಟ್ ಟೆಕ್ನಾಲಜೀಸ್ ಲಿಮಿಟೆಡ್ ಪರವಾಗಿ
(ಈ ಹಿಂದೆ ಎಕ್ಸೆಲ್‌ಸಾಫ್ಟ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು)
ಸಹಿ/-
ಎಸ್. ಎಂ. ಆದಿತ್ಯ ಜೈನ್,
ಕಂಪನಿ ಕಾರ್ಯದರ್ಶಿ, ಮುಖ್ಯ ಅನುಸರಣೆ ಅಧಿಕಾರಿ ಹಾಗೂ ಮುಖ್ಯ ಹೂಡಿಕೆದಾರರ ಸಂಬಂಧ ಅಧಿಕಾರಿ
(ಐಸಿಎಸ್‌ಐ ಸದಸ್ಯತ್ವ ಸಂಖ್ಯೆ: A49042)

ದಿನಾಂಕ: ಆಗಸ್ಟ್ 27, 2026
ಸ್ಥಳ: ಮೈಸೂರು